## 3. ಅಮರ್‌ಸಿಂಗ್, ರಾಜ್ಯಸಭಾ ಸದಸ್ಯ

ಸಮಾಜವಾದಿ ಪಕ್ಷದ ಮಾಜಿ ಮುಖಂಡ ಹಾಗೂ ರಾಜ್ಯಸಭಾ ಸದಸ್ಯ ಅಮರ್ ಸಿಂಗ್ (64) ನಿಧನರಾಗಿದ್ದಾರೆ. ಇವರು ಸಮಾಜವಾದಿ ಪಕ್ಷದ ಮುಖಂಡ ಮುಲಾಯಂ ಸಿಂಗ್ ಯಾದವ್ ಅವರ ಆಪ್ತರಾಗಿ, ಒಂದು ಕಾಲದಲ್ಲಿ ಅಧಿಕಾರ ವಲಯದಲ್ಲಿ ಅಪಾರ ಪ್ರಭಾವ ಬೀರಿದ್ದರು. ಸಿಂಗ್ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಟ್ವೀಟ್‌ನಲ್ಲಿ ಸಂತಾಪ ಸೂಚಿಸಿದ್ದಾರೆ.

**ರಾಜಕೀಯ ಪಯಣ:–** ಉದ್ಯಮ ವಲಯ, ರಾಜಕೀಯ, ಬಾಲಿವುಡ್‌ನಲ್ಲಿ ಸಾಕಷ್ಟು ಗೆಳೆಯರನ್ನು ಹೊಂದುವ ಮೂಲಕ ದೇಶದ ಪ್ರಭಾವಿ ಐಕಾನ್ ಎಂದೇ ಅಮರ್ ಸಿಂಗ್ ಖ್ಯಾತಿ ಗಳಿಸಿದವರು. ಒಂದು ಕಾಲದಲ್ಲಿ ಸಿಂಗ್ ಸಮಾಜವಾದಿ ಪಕ್ಷದ ವರಿಷ್ಠ ಮುಲಾಯಂ ಸಿಂಗ್ ಯಾದವ್ ಅವರ ಬಲಗೈ ಬಂಟನೆಂದೇ ಖ್ಯಾತರಾಗಿದ್ದರು. 2008ರಲ್ಲಿ ಅಣ್ವಸ್ತ್ರ ಒಪ್ಪಂದ ಸಂಬಂಧ ಯುಪಿಎ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಕಮ್ಯೂನಿಸ್ಟ್ ಪಕ್ಷ ವಾಪಸ್ ಪಡೆದ ಸಮಯದಲ್ಲಿ ಅಮರ್ ಸಿಂಗ್ ಸಮಾಜವಾದಿ ಪಕ್ಷದ ಪ್ರಮುಖ ನಾಯಕರಲ್ಲಿ ಒಬ್ಬರಾಗಿದ್ದರು. 1996ರಲ್ಲಿ ಸಿಂಗ್ ಮೊದಲ ಬಾರಿಗೆ ರಾಜ್ಯಸಭೆಗೆ ಆಯ್ಕೆಯಾದರು. 2010ರಲ್ಲಿ ಪಕ್ಷ ವಿರೋಧಿ ಚಟುವಟಿಕೆ ಆರೋಪದ ಮೇಲೆ ಅವರನ್ನು ಉಚ್ಚಾಟಿಸಲಾಯಿತು. ಆದರೂ, 2016ರಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಅದೇ ಪಕ್ಷದ ಬೆಂಬಲದೊಂದಿಗೆ ಮತ್ತೆ ರಾಜ್ಯಸಭೆಗೆ ಪ್ರವೇಶಿಸಿದ್ದರು.

2010ರಲ್ಲಿ ಎಸ್‌ಪಿಯಿಂದ ಉಚ್ಚಾಟಿತರಾದ ಮೇಲೆ ಅಮರ್ ಸಿಂಗ್, 2011ರಲ್ಲಿ ರಾಷ್ಟ್ರೀಯ ಲೋಕ ಮಂಚ್ ಎಂಬ ಹೊಸ ಪಕ್ಷ ಸ್ಥಾಪಿಸಿದರು. 2012ರ ಉತ್ತರಪ್ರದೇಶ ಚುನಾವಣೆಯಲ್ಲಿ 300 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದರು. ಆದರೆ, ಒಂದೇ ಒಂದು ಸೀಟನ್ನೂ ಗೆಲ್ಲಲಿಲ್ಲ. ನಂತರ ಕೆಲವು ತಿಂಗಳ ಮಟ್ಟಿಗೆ ಅವರು ರಾಷ್ಟ್ರೀಯ ಲೋಕದಳಕ್ಕೆ ಸೇರಿ, 2014ರ ಸಂಸತ್ ಚುನಾವಣೆಯಲ್ಲಿ ಫತೇಪುರ ಸಿಕ್ರಿಯಲ್ಲಿ ಸ್ಪರ್ಧಿಸಿ, ಸೋಲುಂಡರು.

ಆಧಾರ:ಪ್ರಜಾವಾಣಿ, ದಿನಾಂಕ:02.08.2020